SHORT NOTICE QUESTION AND ANSWER
FIRE ACCIDENT AT BEERANAHALLI VILLAGE SHIMOGA DISTRICT

13 SRI M.H JAYAPRAKASH NARAYAN (Sirsi).—

Will the Minister for Revenue be pleased to state:—

(*a*) the reasons for the 21 huts belonging to poor families of Harijan Banakar and Bovi castes in Beeranahalli village, Shimoga District catching fire on 21st February 1970;

(*b*) the relief granted by Government to the victimised families of the fire accident;

(*c*) whether arrangements have been made by the Social Welfare Department to get the houses built for the victims belonging to Harijan and other Depressed class families?

SRI H.V. KOUJALGI.— (Minister for revenue)

(*a*) Due to accidental fire.

(*b*) Victims have been granted Rs. 2,060 as relief.

(*c*) Wood etc., have been distributed for construction of houses.

ಶ್ರೀ ಎಂ ಹೆಚ್. ಜಯಪ್ರಕಾಶ್ ನಾರಾಯಣ್:—ಪ್ರತಿ ಸಲವೂ ಹೀಗೆ ಗುಡಿಸಲುಗಳು ಸುಟ್ಟು ಹೋದಾಗ ಸರ್ಕಾರದವರು ಅವುಗಳಿಗೆ ಪ್ರತಿಯೊಂದಕ್ಕೂ ಐವತ್ತು ರೂಪಾಯಿಗಳ ಪರಿಹಾರವನ್ನು ನೀಡುವುದಕ್ಕೆ ಬದಲಾಗಿ ಇನ್ನು ಮುಂದಕ್ಕೆ ಆ ಗುಡಿಸಲುಗಳೇ ಇಲ್ಲದಂತೆ ಮಾಡಲು ಸರ್ಕಾರದವರು ಏನಾದರೊಂದು ಯೋಜನೆಯನ್ನು ಮಾಡುತ್ತಾರೆಯೇ?

† ಶ್ರೀ ಹೆಚ್.ವಿ. ಕೌಜಲಗಿ: ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅವರಿಗೆ ಕ್ಯಾಷ್ ಗ್ರಾಂಟನ್ನು ಕೊಡುವುದರ ಜೊತೆಗೆ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಪುಕ್ಕಟ್ಟೆಯಾಗಿ ಮರಗಳನ್ನು ಕೊಡುತ್ತಿದ್ದೇವೆ. ಪುಕ್ಕಟ್ಟೆಯಾಗಿ ಅವರಿಗೆ ಸೈಟುಗಳನ್ನು ಕೊಡುತ್ತಿದ್ದೇವೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್:—ಇಲ್ಲಿ ಸೂಚಿಸಿರತಕ್ಕ ೨,೦೬೦ ರೂಪಾಯಿಗಳಲ್ಲಿ ಯಾವ ಯಾವ ಸಂಸಾರಕ್ಕೆ ಎಷ್ಟೆಷ್ಟು ಹಣವನ್ನು ಕೊಡಲಾಗಿದೆ?

ಶ್ರೀ ಹೆಚ್. ವಿ. ಕೌಜಲಗಿ:—ಪ್ರತಿಯೊಬ್ಬರಿಗೂ ಆಗಿರತಕ್ಕ ನಷ್ಟದ ಪ್ರಕಾರ ಅದಕ್ಕೆ ಒಂದು ದಾವಾಷ ರೀತಿಯಲ್ಲಿ ೫೦ ರೂಪಾಯಿಗಳಿಂದ ೨೦೦ ರೂಪಾಯಿಗಳವರೆಗೂ ಪರಿಹಾರವನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅದಲ್ಲದೆ ಅಲ್ಲಿ ಒಬ್ಬ ಶ್ರೀಮಂತರು ಬೇರೆ ಒಂದು ನೂರು ರೂಪಾಯಿಗಳನ್ನು ಪುಕ್ಕಟ್ಟೆ ಕೊಟ್ಟಿದ್ದರು ಮತ್ತು ಮತ್ತೊಬ್ಬ ಶ್ರೀಮಂತರು ಅಲ್ಲಿ ಅವರಿಗೆ ಪುಕ್ಕಟ್ಟೆಯಾಗಿ ಊಟ ಹಾಕುವುದಕ್ಕೂ ಕೂಡ ವ್ಯವಸ್ಥೆ ಮಾಡಿದ್ದರು.

ಶ್ರೀ ಎಸ್. ಎಸ್ ಆರಕೇರಿ:—ಅವರಿಗೆ ಹೆಚ್ಚು ನಷ್ಟವಾಗಿದ್ದಾಗ ಪರಿಹಾರ ದ್ರವ್ಯವನ್ನು ಹೆಚ್ಚಿಸುವುದಕ್ಕೆ ಅವಕಾಶವಿಲ್ಲವೇ?

ಶ್ರೀ ಹೆಚ್.ವಿ. ಕೌಜಲಗಿ:—ಕಾನೂನಿನಲ್ಲಿ ಹೇಗಿದೆಯೋ ಅದರ ಪ್ರಕಾರ ಕೊಡಲಾಗುತ್ತಿದೆ.

ಶ್ರೀ ಕೆ. ಪ್ರಭಾಕರ್:—ಈಗ ತಾವು ಕೊಡತಕ್ಕ ಪರಿಹಾರದ ಸ್ಕೇಲನ್ನು ನಿಗದಿ ಮಾಡಿದ್ದು ಯಾವಾಗ?

ಶ್ರೀ ಹೆಚ್. ವಿ. ಕೌಜಲಗಿ:—ಇಲ್ಲಿಯವರೆಗೂ ಕಾನೂನಿನಲ್ಲಿ ಕೊಡಬೇಕೆಂದು ಇದ್ದದ್ದು ೫೦ ರೂಪಾಯಿಗಳ ಮಾತ್ರ. ಕಳೆದ ವರ್ಷ ಆ ಹಣವನ್ನು ೨೦೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

SRI B.B. SAYANAK:—May I know wether the grant is released to the victims and if so, when?

SRI H.V. KOUJALGI:—After the incident.

ಶ್ರೀ ಬಿ.ಪಿ. ಗಂಗಾಧರ್:—ರಾಜ್ಯದಲ್ಲಿ ಎಲ್ಲೆಲ್ಲಿ ಗುಡಿಸಲುಗಳಲ್ಲಿ ಎಷ್ಟೆಷ್ಟಿವೆ ಎಂಬುದನ್ನು ಸರ್ವೆಮಾಡಿ ಸರ್ಕಾರದಿಂದ ಅವರಿಗೆಲ್ಲಾ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೇ? Because ours is a socialist State, it is your duty to do it and I request you to do it.

SRI H.V. KOUJALGI:—It is a suggestion for action.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್:—ಈ ಬಡಜನರ ಗೋಳನ್ನು ತಪ್ಪಿಸಲು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇವರೆಲ್ಲರಿಗೂ ಮನೆಗಳನ್ನು ಒದಗಿಸತಕ್ಕ ಒಂದು ಯೋಜನೆಯನ್ನು ಸೇರಿಸುತ್ತೀರಾ?

SRI H.V. KOUJALGI:—That involves enormous work. Unfortunately such accidents do happen every year and the Government is trying to solve the problem in stages.

SRI J.P. SARWESH:—May I know whether it is due to the mischief of somebody or whether it is due to accident?

SRI H.V. KOUJALGI:—After an enquiry it has been found that is due to accident; nobody has complained that is due to mischief.

SRI G. CHANDRAKANT:—The suggestion made by Sri Gangadhar is a good one. Will the Government compensate the sufferers to the fullest extent?

SRI H. V. KOUJALGI:—When such accidents happen in a larg number, it becomes very difficult for the Government to pay compensation in full.